


ಇದ್ದುಬಿಟ್ಟನಂತೆ. ಓಡಿಹೋದವರಿಗೆ ಕನ್ನಮಾರಿ ತಂದೆ ಶಿಕ್ಷೆ ಕೊಡುವುದಿಲ್ಲ. ನಾನು ಗುಂಪಿನ ಯಜಮಾನನಾದ್ದರಿಂದ ನನಗೇ ಆ ಶಿಕ್ಷೆ, ಮಕ್ಕಳು ಮಾಡಿದ ಪಾಪ ಯಜಮಾನನಿಗೆ ಎಂದು ಗೌಡನ ದನದ ಕೊಟ್ಟಿಗೆಯಲ್ಲೇ ಜೀತಕ್ಕೆ ಉಳಿದನಂತೆ.

ತಾತನು ತೀರಿಕೊಂಡು ಅಪ್ಪನು ಊರಾಚೆ ಹಳ್ಳದ ದಂಡೆಯಲ್ಲಿ ವಪ್ಪಾರೆ ಎತ್ತಿ ವಾಸವಾದ ಮೇಲೆ, ನನ್ನ ಅವ್ವ ನನ್ನನ್ನು ಊರೊಳಗಿನ ಶಾಲೆಗೆ ಕರೆತಂದು ಸೇರಿಸಿಬಿಟ್ಟಳು. ಅಲ್ಲಿ ಮೇಷ್ಟ್ರು, 'ಏನು ನಿನ್ನ ಮಗನ ಹೆಸರು' ಎಂದು ಕೇಳಲು, ಅವ್ವ, 'ಕನ್ನ ಮಾರಿ ಅಂತ ಬರ್ಕಳಿ ಬುದ್ಧಿ' ಅಂದವಳು, ನನಗೆ ಮೂರ್ನಾಲ್ಕು ಅಕ್ಷರವನ್ನಾದರೂ ಕಲಿಸಬೇಕೆಂದು ಕೈ ಮುಗಿದದ್ದು ಚೆನ್ನಾಗಿಯೇ ನೆನಪಿನಲ್ಲಿದೆ. ಅಪ್ಪ ಆಗಾಗ ಎಲ್ಲೆಲ್ಲೊ ಕೂಲಿಗೆಂದು ಹೋಗುವಲ್ಲಿ, ಬರುವಲ್ಲಿ ಅವ್ವ ನನ್ನನ್ನು ಸ್ಕೂಲಿಗೆ ಸೇರಿಸುತ್ತೇನೆಂದರೆ, 'ಅಯ್ಯಯ್ಯೊ ಸೆನಿಮುಂಡೆ ನಮ್ಮ ಕುಲಕಸುಬಿಗೆ ಇಸ್ಕೂಲು ಆಗಿಬರಲ್ಲ ನೋಡು, ದೇವತೆ ಅಪ್ಪಣೆ ಕೇಳಬೇಕು' ಎನ್ನುತ್ತಿದ್ದ. ಅವ್ವನಾದರೋ ಮೊನ್ನೆ ರಾತ್ರಿ ನೀನು ಕಳ್ಳಕಸುಬು ಮಾಡಿ ಬಂದಾಗ ವತಾರೆದ್ದು ದೇವತೆಗೆ ಗಂಧದಕಡ್ಡಿ ಕರ್ಪೂರ ಬೆಳಗಿ ಕೇಳಿದೆನೆಂದು, ಸ್ವಾಮಿ ಕನ್ನಮಾರಿ ತಂದೆ ಆಗಬಹುದೆಂದು ಅಪ್ಪಣೆ ಕೊಡಿಸಿದನೆಂದೂ ಹೇಳಿಬಿಟ್ಟಳು. ಅಪ್ಪ ಬೇರೆ ಮಾತು ಬರದವನಂತೆ ಸುಮ್ಮನಾದ.

ಅವ್ವ ನನ್ನನ್ನು ಶಾಲೆಗೆ ತಂದು ಮೇಷ್ಟ್ರ ಮುಂದೆ ನಿಲ್ಲಿಸಿ ಕಳ್ಳತನದ ಕುಲಕಸುಬನ್ನೇ ಹೇಳುತ್ತ, 'ಕನ್ನ ಮಾರಿ ಅಂತ, ಅಂಗೇ ಬರ್ಕಳಿ' ಅಂದಿದ್ದಳು. ಆಗ ಮೇಷ್ಟ್ರು 'ಬ್ಯಾಡಕಣಮ್ಮ ಕನ್ನ ಮರಿ ಅಂತ ಬರ್ಕತ್ತೀನಿ' ಅಂದರಂತೆ. ಅವ್ವ ದೇವರ ಹೆಸರು ಬದಲಾದದ್ದಕ್ಕೆ ಕೊಂಚ ಬೆದರಿದರೂ ನಾನು ಶಾಲೆಗೆ ಸೇರುತ್ತಿರುವೆನೆಂಬ ಸಂಭ್ರಮದಲ್ಲಿ, 'ಆಯ್ತು ಬುದ್ಧಿ' ಅಂದುಬಿಟ್ಟಳು! ಆ ಮುಂದೆ ಮೇಸ್ಟ್ರು, 'ಅಡ್ರೆಸ್ಸು ಏನಂತ ಬರ್ಕಳದಮ್ಮ' ಅಂದಲ್ಲಿ ಅವ್ವ ಅಡ್ರೆಸ್ಸು ಎಂಬ ಇಂಗ್ಲಿಷ್ ಪದವೂ, ವಿಳಾಸ ಎಂಬ ಕನ್ನಡ ಶಬ್ದವೂ ಗೊತ್ತಿಲ್ಲದೇ ಹೋದುದರಿಂದ ಅದು ತನ್ನ ಗಂಡನಿಗೆ ಸಂಬಂಧಪಟ್ಟ ವಿಷಯವೆಂದು ಗ್ರಹಿಸಿ, 'ಅದೇಕನಿ ಬುದ್ಧಿ ನಮ್ಮಟ್ಟಿಯವರು ಗೌಡರಟ್ಟಲಿ ಜೀತಕ್ಕಿರದು, ರಾತ್ರಿ ಅವರ ತ್ವಾಟ ತುಡಿಕೆ ಕಾವಲು ಕಾಯದು ನಮ್ಮಟ್ಟಿಯವರೇ' ಅಂದಳು. ಆಗ ಮೇಷ್ಟ್ರು, 'ಇರ್ಲಿ ಸದ್ಯಕ್ಕೆ ನಿಮ್ಮ ಅಡ್ರೆಸ್ಸು ಏನು ಅಂತ ಗ್ಯಾರಂಟಿ ಇಲ್ದೆ ಇರದರಿಂದ ಗೌಡರಬೀದಿ, ಊರೆಸುರು ಹಾಕ್ತಿನಿ' ಅಂದರು. ಮೇಷ್ಟ್ರು ಹಾಗೆನ್ನುವಲ್ಲಿ ನಾವು ಊರಾಚೆ ಇದ್ದ ಸಮಾಚಾರವೂ, ಅಲೆಮಾರಿಗಳೆಂಬುದೂ, ಯಾವ ಊರೂ ನಮ್ಮದಲ್ಲವೆಂಬುದೂ ಅವರಿಗೆ ಗೊತ್ತಿದ್ದಂತಿತ್ತು. ಹೀಗಾಗಿ, ನನ್ನ ಹೆಸರು ಕನ್ನಮಾರಿ